

# ಶಿಖರಗಳ ನಡುವಣ ಸೌಂದರ್ಯ ಶಿಖರ

**ಅರುಣಾಚಲ ಪ್ರದೇಶ ಕುಂಭಕರ್ಣನಂತಹದ್ದು. ಆರು ತಿಂಗಳ ಕಾಲ ಹಿಮದ ಸಖ್ಯ, ಉಳಿದ ಸಮಯದಲ್ಲಿ ಸೂರ್ಯ ಸಂಗ! ಅಲ್ಲಿನ ಪರಿಸರದಲ್ಲಿ ಬುದ್ಧನ ಉಸಿರಿರಬಹುದು ಎಂಬಂತೆ ಭಾಸವಾಗುತ್ತದೆ. ಪ್ರಕೃತಿಯ ಮುನಿಸು ಮತ್ತು ಅನುಗ್ರಹ ಎರಡೂ ಧಾರಾಳವಾಗಿರುವ ಅರುಣಾಚಲ ರಾಜ್ಯದ ಕುರಿತ ಈ ಬರಹ, ಆರ್ಕಿಡ್‌ಗಳ ನಾಡಿನ ಭೇಟಿಗೆ ಸಹೃದಯರನ್ನು ಪ್ರೇರೇಪಿಸುವಂತಿದೆ.**

**■ ಎಸ್. ನಟರಾಜ ಬೂದಾಳು**

ನೋಡಿ ನೋಡಿ ಕಣ್ಣು ಮಂಜಾಗಿಸುವಷ್ಟು ಸುಂದರ ಆರ್ಕಿಡ್ ಹೂಗಳಿಂದ ತುಂಬಿರುವ, ಅಷ್ಟೇ ಸುಂದರವಾದ ಸರೋವರಗಳಿರುವ, ಒಂದಕ್ಕಿಂತ ಒಂದು ಚಂದ ಅನ್ನಿಸುವ ಬೌದ್ಧ ವಿಹಾರಗಳ ನಾಡು ಅರುಣಾಚಲ ಪ್ರದೇಶ. ಭೂತಾನ್ ಮತ್ತು ಚೀನಾ ದೇಶಗಳೊಂದಿಗೆ ಗಡಿಯನ್ನು ಹಂಚಿಕೊಂಡಿರುವ ಭಾರತದ ನೆಲ. ಕಣ್ಣು ಕಿರಿದಾಗಿಸಿ ನೋಡಬೇಕಾದ ಹಿಮಾಲಯದ ಆಳ ಕಣಿವೆಗಳಲ್ಲಿ, ಚೆಂಡುಮುರಿದುಕೊಂಡು ನೋಡಬೇಕಾದ ಶಿಖರಗಳ ನಡುವೆ ಇದೆಯೋ ಇಲ್ಲವೋ ಎನ್ನುವಂತೆ ಬದುಕುತ್ತಿರುವ ರಾಜ್ಯ. ವರ್ಷಪೂರ್ತಿ ಭಾರತೀಯ ಸೇನಾನೆಲೆಗಳ ಓಡಾಟ ಚುರುಕಾಗಿರುತ್ತದೆ. ಎಲ್ಲ ಕಡೆಗೂ ಸೇನೆಯ ಕಣ್ಗಾವಲು ಇದ್ದೇ ಇರುತ್ತದೆ. ಬೇಸಿಗೆಯಲ್ಲಿಯೂ ಮೈಗದಗುಡುವ ಚಳಿ. ಆಗಾಗ್ಗೆ ಹಿಮಪಾತ ಆಗುತ್ತಲೇ ಇರುವ ನೆಲ. ಸಮತಟ್ಟಾದ ನೆಲವೇ ಇಲ್ಲದಿರುವ ರಾಜ್ಯ! ಹಾಗಾಗಿ ಯಾವ ಕಡೆಯಿಂದ ಹೋದರೂ ಮುನ್ನೂರು ಕಿಲೋಮೀಟರುಗಳ ಕಡಿದಾದ ಏರುವಿಕೆಯ ಪ್ರಯಾಣವನ್ನು ಮಾಡಿಯೇ ತಲುಪಬೇಕು. ಇಟಾ ನಗರ ಇದರ ರಾಜಧಾನಿ. ನಾವು ಹೋದದ್ದು ಚೀನಾ–ಭೂತಾನ್‌ಗಳಿಗೆ ಹತ್ತಿಕೊಂಡಿರುವ ಸುಂದರವಾದ ತವಾಂಗ್‌ಗೆ. ಅದೊಂದು ನಂದನದ ತುಣುಕೇ ಸರಿ!

## ಚೆಲುವಿನ ಆರ್ಕಿಡ್-ಬೌದ್ಧ ವಿಹಾರಗಳ ಅರುಣಾಚಲ

ಅರುಣಾಚಲದ ಹಿಮಾಲಯವನ್ನು ಅನುಭವಿಸಲು ಅಸ್ಸಾಮಿನ ಗುವಾಹಟಿಯಿಂದ 438 ಕಿ.ಮೀ.ಗಳ ಈ ಹಿಮಾಲಯದ ರಸ್ತೆ ಪ್ರಯಾಣ ಅತ್ಯಂತ ರೋಚಕವಾಗಿತ್ತು. ಗುವಾಹಟಿಯ ವಿಮಾನ ನಿಲ್ದಾಣದಲ್ಲಿ ಇಳಿದ ನಮ್ಮನ್ನು ಬಿರುಬಿಸಿಲು ಸ್ವಾಗತಿಸಿತು. ಅಲ್ಲಿಂದ ಮುಖ್ಯ ಬಸ್ ನಿಲ್ದಾಣವಾದ ಪಾಲ್ತನ್ ಬಾಜಾರ್‌ಗೆ ಹೋಗಲು ಅಸ್ಸಾಂ ರಾಜ್ಯದ ಕೊಳಕಾದ ಹವಾನಿಯಂತ್ರಿತ ಬಸ್ ಕಾದು ನಿಂತಿತ್ತು. ಎಲ್ಲ ಮೂವತ್ತೈದು ಜನ ತುಂಬಿದ ಮೇಲೆ ಹೊರಟ ಆ ಸರ್ಕಾರಿ ಬಸ್ಸಿನಲ್ಲಿ ಟಿಕೆಟ್ ಕೊಡುವ ವ್ಯವಸ್ಥೆ ಇದ್ದಂತಿರಲಿಲ್ಲ. ಎಲ್ಲರಿಂದ ನೂರು ನೂರು ರೂಪಾಯಿ ವಸೂಲು ಮಾಡಿಕೊಂಡ ಕಂಡಕ್ಟರನಿಗೆ ಯಾರೂ ಟಿಕೆಟ್ ಕೇಳುವ ಸಾಹಸ ಮಾಡಲಿಲ್ಲ. ಗುವಾಹಟಿಯ ಮುಖ್ಯ ಬಸ್ ನಿಲ್ದಾಣ ನಮ್ಮ ಕೊರಟಗೆರೆಯ ಬಸ್ ನಿಲ್ದಾಣದ ಎದುರು ನಿವಾಳಿಸಿ ಬಿಸಾಕುವಂತಿತ್ತು. ನಗರವನ್ನು ಗುಡಿಸಿ ಸ್ವಚ್ಛಗೊಳಿಸುವ ಅಭ್ಯಾಸ ಅಲ್ಲಿ ಇಲ್ಲ ಎನ್ನುವುದು ಗೊತ್ತಾಗುತ್ತಿತ್ತು.